Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

Volume 39 | Issue - 36 | 27th February 2025

## Impressions on World Understanding and Peace Day

Time : 7.00 p.m.
Venue : Hotel Shivaprasad Grand, Kundapura

**39th year of Service and Fellowship**

## ವಾರದ ವರದಿ




ತಾ. 20–02–2025ರ ಗುರುವಾರದ ವಾರದ ಸಭೆಯು ಶಿವಪ್ರಸಾದ್ ಗ್ರ್ಯಾಂಡ್‌ನಲ್ಲಿ ನಡೆಯಿತು. ಕ್ಲಬ್ ಅಸೆಂಬ್ಲಿ ಆಗಿದ್ದ ಈ ಸಭೆಗೆ ರೊ. ಶ್ರೀನಿವಾಸ ಶೇಟ್‌ರವರು ಪ್ರಾರ್ಥನೆಯ ಮೂಲಕ ಚಾಲನೆ ನೀಡಿದರು. ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರು ವಾರದ ವರದಿ ವಾಚಿಸಿದರು. ರೊ. ಸುರೇಖಾ ಪುರಾಣಿಕ್ ರವರು ವಾರದ ಚಿಂತನೆಯಲ್ಲಿ ಜೀವನದಲ್ಲಿ ಸಂತೋಷದಿಂದ ಬದುಕಬೇಕಿದ್ದರೆ ಇನ್ನೊಬ್ಬರ ವಿಷಯದಲ್ಲಿ ಮೂಗು ತೂರಿಸಬಾರದು ಎಂದು ಸಣ್ಣ ಕತೆಯ ಮೂಲಕ ತಿಳಿಸಿದರು. ರೊ. ಸತ್ಯನಾರಾಯಣ ಪುರಾಣಿಕರು ರೋಟರಿ ಮಾಹಿತಿಯಲ್ಲಿ ರೋಟರಿಯ ಗೌರವಾನ್ವಿತ ಸದಸ್ಯರ ಬಗ್ಗೆ ಮಾಹಿತಿ ನೀಡಿದರು.

ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಸದಸ್ಯರನ್ನು ಉದ್ದೇಶಿಸಿ ಮಾತನಾಡಿ ಪಿಡಿಜಿ ರೊ. ಅಭಿನಂದನ್ ಶೆಟ್ಟಿಯವರ ಮುಡಿಗೆ ಇನ್ನೊಂದು ಕಿರೀಟ ಲಭಿಸಿದೆ. ಅವರು Joint Strategic Planing Member ಆಗಿ 4 ವರ್ಷದವರೆಗೆ ಆಯ್ಕೆ ಆಗಿರುವುದಕ್ಕೆ ಅಭಿನಂದನೆಯನ್ನು ಸಲ್ಲಿಸಿದರು. ನಂತರ 23–02–2025ರ ಭಾನುವಾರ ನಡೆಯುವ World Understanding and Peace Dayಯ ಕಾರ್ಯಕ್ರಮದ ರೂಪುರೇಷೆಯನ್ನು ತಿಳಿಸಿ ಎಲ್ಲರೂ ಸಕುಟುಂಬ ಸಮೇತರಾಗಿ ಬಂದು ಕಾರ್ಯಕ್ರಮದ ಯಶಸ್ಸಿಗೆ ಕಾರಣರಾಗಬೇಕೆಂದು ಸದಸ್ಯರಲ್ಲಿ ಕೇಳಿಕೊಂಡರು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಸಂಜೆ 6 ಗಂಟೆಗೆ ಸರಿಯಾಗಿ ಯುವ ಮೆರಿಡಿಯನ್‌ನ ಓಪೆರಾ ಪಾರ್ಕ್‌ನಲ್ಲಿ ಆಳ್ವಾಸ್ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಿಂದ ನೃತ್ಯ ವೈಭವ ಕಾರ್ಯಕ್ರಮವಿದ್ದು, ಸದಸ್ಯರು ಕ್ಲಪ್ತ ಸಮಯದಲ್ಲಿ ಹಾಜರಿರುವಂತೆ ಕೇಳಿಕೊಂಡರು.

ರೊ. ಕೆ. ಕೆ. ಕಾಂಚನ್‌ರವರು ಧನ್ಯವಾದ ಸಮರ್ಪಣೆಗೈದರು. ರಾಷ್ಟ್ರಗೀತೆಯೊಂದಿಗೆ ಸಭೆ ಸಂಪನ್ನಗೊಂಡಿತು.

## Congratulations



**Rtn. Abhinandan Arunkumar Shetty,** Member of Rotary Club Kundapura South, Zone - 7, India has been invited to serve as member of the **Joint Strategic Planning Committee of Rotary International for a period of 4 years effective 1st July, 2025 to 30th June, 2029.** This communication was issued jointly by incoming RI President Mario Cesar Martins De Camargo and incoming TRF Trustee Chair Holger Knack. Rotarian Shetty was Past DRR of RI District 3180 and Past District Governor of 3182 in 2018-19. He will be serving as Regional Public Image Coordinator of Zone - 7 from 2025 to 2028. Strategic Planning Committee advices the Board and the Trustees on matters regarding Strategic Plan for the organisation.

ತಾ. 23–02–2025ರ ಭಾನುವಾರದಂದು World Understanding and Peace Day ಆಚರಣೆಯು ನಮ್ಮ ಕ್ಲಬ್‌ನ ಆತಿಥ್ಯದಲ್ಲಿ ಬಹಳ ಅದ್ದೂರಿಯಾಗಿ ಕೋಟೇಶ್ವರದ ಯುವ ಮೆರಿಡಿಯನ್ ಓಪೆರಾ ಪಾರ್ಕ್‌ನಲ್ಲಿ ನಡೆಯಿತು. ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷ ರೊ. ಮಹೇಂದ್ರ ಶೆಟ್ಟಿಯವರು ಈ ಕಾರ್ಯಕ್ರಮದ ಸಂಪೂರ್ಣ ಸಾರಥ್ಯ ವಹಿಸಿಕೊಂಡಿದ್ದರು. ಸಂಜೆಯ ಸಮಯದಲ್ಲಿ ಮೂಡಬಿದ್ರೆ ಆಳ್ವಾಸ್ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಿಂದ ಸುಮಾರು ಒಂದು ಗಂಟೆಯ ಕಾಲ ಸಾಂಸ್ಕೃತಿಕ ವೈಭವವು ನಡೆದು ನೆರೆದವರ ಮೆಚ್ಚುಗೆಗೆ ಪಾತ್ರವಾಯಿತು. ಮುಖ್ಯ ಅತಿಥಿಗಳಾದ ಮಾಜಿ ಸಚಿವ ಶ್ರೀ ಕೆ. ಜಯಪ್ರಕಾಶ್ ಹೆಗ್ಡೆಯವರನ್ನು ಚಂಡೆ ವಾದ್ಯಗಳೊಂದಿಗೆ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟಕರಾದ ಶ್ರೀ ಜಯಪ್ರಕಾಶ್ ಹೆಗ್ಡೆಯವರೊಂದಿಗೆ ವಲಯದ ಅಸಿಸ್ಟೆಂಟ್ ಗವರ್ನರ್ ರೊ. ಡಾ. ರಾಜೇಂದ್ರ ಶೆಟ್ಟಿ, ZL ರೊ. ಮಹೇಂದ್ರ ಶೆಟ್ಟಿ, ZL ರೊ. ಪ್ರದೀಪ್ ಡಿ.ಕೆ. ZL ರೊ. ವೆಂಕಟೇಶ್ ವೇದಿಕೆಯನ್ನು ಹಂಚಿಕೊಂಡರು. ಅವರೊಂದಿಗೆ ನಮ್ಮ ಕ್ಲಬ್ಬಿನ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾ, ಕಾರ್ಯದರ್ಶಿ ರೊ. ಭರತ್ ಶೆಟ್ಟಿ, ರೋಟರಿ ಕ್ಲಬ್ ಸಿದ್ದಾಪುರದ ಅಧ್ಯಕ್ಷ ರೊ. ಸುಹಾಸ್ ಚಾತ್ರ, ರೋಟರಿ ಕ್ಲಬ್ ಗಂಗೊಳ್ಳಿಯ ಅಧ್ಯಕ್ಷೆ ರೊ. ಚಂದ್ರಕಲಾ ತಾಂಡೇಲಾ, ರೋಟರಿ ಕ್ಲಬ್ ಕುಂದಾಪುರ ಮಿಡ್‌ಟೌನ್ ಅಧ್ಯಕ್ಷ ರೊ. ಶೇಖರ ಎನ್. ಶೆಟ್ಟಿ, ರೋಟರಿ ಕ್ಲಬ್ ಕುಂದಾಪುರ ರಿವರ್‌ಸೈಡ್ ಅಧ್ಯಕ್ಷ ರೊ. ವಿಶ್ರಾಂತ್ ಶೆಟ್ಟಿ, ರೋಟರಿ ಕ್ಲಬ್ ಕುಂದಾಪುರದ ಅಧ್ಯಕ್ಷ ರೊ. ಲಿಯಾಕತ್ ಅಲಿ, ರೋಟರಿ ಕ್ಲಬ್ ಬೈಂದೂರಿನ ಅಧ್ಯಕ್ಷ ರೊ. ಮೋಹನ್ ರೇವಣ್‌ಕರ್, ರೋಟರಿ ಕ್ಲಬ್ ಕುಂದಾಪುರ ಸನ್‌ರೈಸ್‌ನ ಅಧ್ಯಕ್ಷ ರೊ. ಪ್ರಶಾಂತ್ ಹವಾಲ್ದಾರ್ ವೇದಿಕೆಯನ್ನು ಅಲಂಕರಿಸಿದ್ದರು.

ಅಂಕಿತಾ ಹೆಗ್ಡೆಯರು ಸುಮಧುರ ಕಂಠಸಿರಿಯಲ್ಲಿ ದೇವತಾ ಪ್ರಾರ್ಥನೆ ನೆರವೇರಿ ಸಭಾ ಕಾರ್ಯಕ್ರಮ ಆರಂಭಗೊಂಡಿತು. ಉದ್ಘಾಟಕರಾಗಿ ಆಗಮಿಸಬೇಕಿದ್ದ ವಿಧಾನಸಭಾ ಸ್ಪೀಕರ್ ಶ್ರೀ ಯು. ಟಿ. ಖಾದರ್‌ರವರು ಹಾಗೂ ಪಿಡಿಜಿ ರೊ. ಅಭಿನಂದನ್ ಶೆಟ್ಟಿಯವರು ಆಗಮಿಸಲು ಆಸಾಧ್ಯವಾದ ಕಾರಣ ಅವರ ಶುಭಾಶಯ ಸಂದೇಶವನ್ನು VT ಮೂಲಕ ಪ್ರಸಾರ ಪಡಿಸಲಾಯಿತು.

ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸ ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರನ್ನು, ನೆರೆದ ಎಲ್ಲರನ್ನೂ ಪ್ರೀತಿಪೂರ್ವಕವಾಗಿ ಸ್ವಾಗತಿಸಿದರು. ಕಾರ್ಯಕ್ರಮದ ರೂವಾರಿ ZL ರೊ. ಮಹೇಂದ್ರ ಶೆಟ್ಟಿಯವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ Zone ನ ಎಲ್ಲಾ ಕ್ಲಬ್‌ನ ಸದಸ್ಯರು ಹೆಚ್ಚಾಗಿ ಒಟ್ಟು ಸೇರುವುದು Cultural ಹಾಗೂ Sports Meetನಲ್ಲಿ ಮಾತ್ರ ಆದರೆ ಅಲ್ಲಿ ಸ್ಪರ್ಧಾ ಮನೋಭಾವವಿರುತ್ತದೆ. ಆ ಕಾರಣದಿಂದ ಎಲ್ಲರಲ್ಲೂ ಪರಸ್ಪರ ಭಾವೈಕ್ಯತೆ ವೃದ್ಧಿಯಾಗಬೇಕೆಂಬ ಸದುದ್ದೇಶದಿಂದ ಈ World Understanding and Peace Day ಯನ್ನು ಆಚರಣೆಯನ್ನು ವಲಯದ ಎಲ್ಲಾ ಕ್ಲಬ್‌ನವರು ಜೊತೆಯಾಗಲು ಸಾಧ್ಯವಾಗುವಂತೆ ವಿಭಿನ್ನವಾಗಿ ಆಚರಿಸುವ ಆಲೋಚನೆ ಮಾಡಿರುವುದಾಗಿ ತಿಳಿಸಿದರು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆಯವರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ, ಶುಭಾಶಯ ನುಡಿಯನ್ನಿತ್ತರು. ಅಸಿಸ್ಟೆಂಟ್ ಗವರ್ನರ್ ರೊ. ಡಾ. ರಾಜೇಂದ್ರ ಶೆಟ್ಟಿಯವರು ಚುಟುಕಾಗಿ ಕಾರ್ಯಕ್ರಮಕ್ಕೆ ಹಾಗೂ ಕ್ಲಬ್‌ಗೆ ಶುಭ ಹಾರೈಸಿದರು. ನಂತರ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ನಮ್ಮೂರಿನ ಸಾಧಕರಿಗೆ ಸನ್ಮಾನ ಕಾರ್ಯಕ್ರಮವು ನಡೆಯಿತು. ಗೀತಾನಂದ ಫೌಂಡೇಶನ್ ಮಣೂರು ಇದರ ಪ್ರವರ್ತಕರಾದ ಶ್ರೀ ಆನಂದ್ ಸಿ. ಕುಂದರ್, ಲೈಫ್‌ಲೈನ್ ಫೀಡ್ಸ್ ಪ್ರೈವೆಟ್ ಲಿಮಿಟೆಡ್‌ನ ಚೇರ್‌ಮನ್ ಹಾಗೂ ಆಡಳಿತ ನಿರ್ದೇಶಕರಾದ ಶ್ರೀ ಕಿಶೋರ್ ಕುಮಾರ್ ಹೆಗ್ಡೆ, ಯೂನಿವರ್ಸಲ್ ಗ್ರೂಪ್ ಆಫ್ ಇನ್ಸಿಟ್ಯೂಟ್‌ನ ಸಂಸ್ಥಾಪಕರಾದ ಶ್ರೀ ಆರ್. ಉಪೇಂದ್ರ ಶೆಟ್ಟಿ, ಭಾರತ ಸರ್ಕಾರದ ಉನ್ನತ ಬಾಹ್ಯ ಗುಪ್ತಚರ ಸಂಸ್ಥೆಯ ಮಾಜೀ ಅಧಿಕಾರಿಗಳಾದ ಸ್ಟೀವನ್ ಎಂ. ಪಿ. ಡಯಾಸ್ ಹಾಗೂ ಕ್ಲೀನ್ ಕುಂದಾಪುರ ಪ್ರಾಜೆಕ್ಟ್‌ನ ರೂವಾರಿಯಾದ ಶ್ರೀ ಭರತ್ ಬಂಗೇರರವರು ಈ ಕಾರ್ಯಕ್ರಮದಲ್ಲಿ ಸನ್ಮಾನಿತಗೊಂಡ ಸಾಧಕರು.

ಸನ್ಮಾನ ಕಾರ್ಯಕ್ರಮದ ಬಳಿಕ ಮುಖ್ಯ ಅತಿಥಿಗಳಾದ ಶ್ರೀ ಜಯಪ್ರಕಾಶ್ ಹೆಗ್ಡೆಯವರನ್ನು ಸನ್ಮಾನಿಸಿ ಗೌರವಿಸಲಾಯಿತು. ರೋಟರಿ ಕುಟುಂಬದ ಮೂವರು ಲಕ್ಕಿ ರೊಟೇರಿಯನ್ ಆಗಿ ಮೂಡಿಬಂದು ಆಕರ್ಷಕ ಬಹುಮಾನಕ್ಕೆ ಭಾಜನರಾದರು. ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರು ಧನ್ಯವಾದ ಸಮರ್ಪಣೆಗೈದರು. ಸೌಜನ್ಯಾ ಹೆಗ್ಡೆ ಕಾರ್ಯಕ್ರಮವನ್ನು ಅತ್ಯುತ್ತಮವಾಗಿ ನಿರೂಪಿಸಿದರು. ಕಾರ್ಯಕ್ರಮದ ಸ್ಟೇಜ್ ನಿರ್ವಹಣೆಯನ್ನು ರೊ. ಕೆ. ಕೆ. ಕಾಂಚನ್, ರೊ. ವಿವಿಯನ್ ಕ್ರಾಸ್ತಾ, ರೊ. ಜೆರಾಲ್ಡ್ ಕ್ರಾಸ್ತಾರವರು ಅಚ್ಚುಕಟ್ಟಾಗಿ ನಿರ್ವಹಿಸಿದರು. ಶುಚಿ– ರುಚಿಯಾದ ಭೋಜನದೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.





Rtn. Dr. S. N. Padiyar 1985-86 & 1986-87 | Rtn. B. Arun Kumar Shetty 1987-88 | Rtn. Dr. H. Rammohan 1988-89 | Rtn. K. Shridhar Kamath 1989-90 | Rtn. Dr. Anand Nayak 1990-91 | Rtn. B. Ramachandra Prabhu 1991-92 | Rtn. G. Santhosh Kumar Shetty 1992-93 | Rtn. Dr. H. A. Vishweshwar 1993-94 | Rtn. Dr. H. R. Hebbar 1994-95



Rtn. K. T. Surendranath 1995-96



Rtn. S. Sadananda Chatra 1996-97



Rtn. B. C. Somayaji 1997-98



Rtn. K. Suresh Kamath 1998-99



Rtn. S. Subraya Halambi 1999-2000



Rtn. S. Vijaya Shetty 2000-01



Rtn. K. Seetharama Nackathaya 2001-02




Rtn. U. S. Shenoy 2002-03



Rtn. Dr. Umesh Puthran 2003-04



Rtn. Dr. B. V. Udupa 2004-05



Rtn. A. Shantharam Pai 2005-06



Rtn. K. Shantharam Prabhu 2006-07

## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ತಾ. 03-03-2025ನೇ ಸೋಮವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ವಾಸುದೇವ ಕಾರಂತ್ ಮತ್ತು ಆ್ಯನ್ ಅನುಸೂಯ ಕಾರಂತ್ ಇವರಿಗೆ ಕ್ಲಬ್ಬಿನ ಎಲ್ಲಾ ಸದಸ್ಯರ ಪರವಾಗಿ ಶುಭಾಶಯಗಳು.

ಮೊಬೈಲ್ : 82776 12815

## ಹುಟ್ಟುಹಬ್ಬದ ಶುಭಾಶಯಗಳು



ರೊ. ಪ್ರಿಯಾಂಕ ಜೋಗಿ

ದಿನಾಂಕ : ಮಾರ್ಚ್ 1

ಮೊಬೈಲ್ : 9480004748

## Rotary Information

**Honorary members** (ಗೌರವಾನ್ವಿತ ಸದಸ್ಯರು)

ಸಮಾಜದಲ್ಲಿ ತಮ್ಮ ವಿಶಿಷ್ಟತೆಯಿಂದ ಗುರುತಿಸಿ ಕೊಂಡಿದ್ದ, ರೋಟರಿಯ ಧ್ಯೇಯ ಉದ್ದೇಶಗಳ ಕುರಿತು ಸಮಗ್ರ ಅರಿವು, ಒಲವು ಇದ್ದ ಗಣ್ಯರನ್ನು ಗೌರವಾನ್ವಿತ ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದು. ಈ ಸದಸ್ಯರು ಸದಸ್ಯತ್ವ ಶುಲ್ಕ ಪಾವತಿಸಬೇಕಿಲ್ಲ. ಇವರು ಕ್ಲಬ್ಬಿನ ಯಾವ ಹುದ್ದೆ ಅಲಂಕರಿಸುವಾಗಿಲ್ಲ ಮತ್ತು ವೋಟಿನ ಅಧಿಕಾರ ಹೊಂದಿರುವುದಿಲ್ಲ. ಹಾಜರಾತಿಯ ಕಡ್ಡಾಯವಿರುವುದಿಲ್ಲ. ಇವರು ರೋಟರಿಯ ಎಲ್ಲಾ ಸಭೆ, ಕಾರ್ಯಕ್ರಮ, ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬಹುದು.

**By Rtn. Sathyanarayana Puranik**

## ಕಳೆದ ವಾರದ ಚಿಂತನೆ

ಜೀವನದಲ್ಲಿ ನೆಮ್ಮದಿಯಿಂದ ಸಂತೋಷದಿಂದ ಆಯುಷ್ಯ ಪೂರ್ತಿ ಬದುಕ ಬೇಕಿದ್ದರೆ ಇನ್ನೊಬ್ಬರ ವಿಷಯದಲ್ಲಿ ಮೂಗು ತೂರಿಸದೆ, ತಲೆ ಕೆಡಿಸಿಕೊಳ್ಳದೆ ಇದ್ದರೆ ಚೆನ್ನ. ಇದಕ್ಕೆ ಪೂರಕವಾದ ಒಂದು ಸಣ್ಣ ಕತೆ ಹೀಗಿದೆ...

ಒಂದು ಪುಟ್ಟ ಹುಡುಗಿ ತೀರ ಚಳಿ ಇದ್ದ ದಿನ ಪಾರ್ಕೊಂದರಲ್ಲಿ ಐಸ್ ಕ್ರೀಮ್ ಮೆಲ್ಲುತ್ತಾ ಇದ್ದಳು. ನಡು ವಯಸ್ಕ ಮಹನೀಯರೊಬ್ಬರು "ಇಂತ ಚಳಿ ದಿನದಲ್ಲಿ ಐಸ್ ಕ್ರೀಮ್ ತಿಂದರೆ ಆರೋಗ್ಯ ಕೆಡುವುದಿಲ್ಲವೇ" ಎಂದು ಪ್ರಶ್ನಿಸಿದರು. ಅದಕ್ಕೆ ಹುಡುಗಿ " ನನ್ನ ಅಜ್ಜಿ 103 ವರ್ಷ ಬದುಕಿದ್ದಳು" ಎಂದಳು. "ಐಸ್ ಕ್ರೀಮ್ ತಿಂದಾ?" "ಅಲ್ಲ ಅಂಕಲ್, ಇನ್ನೊಬ್ಬರ ವಿಷಯದಲ್ಲಿ ತಲೆಕೆಡಿಸಿಕೊಳ್ಳದೆ ಇದ್ದಿದ್ದರಿಂದ".

ನೀಡಿದವರು : ರೊ. ಸುರೇಖಾ ಎಸ್. ಪುರಾಣಿಕ್

## The 4 Way Test

*of the things we think, say or do*

1. Is it the TRUTH?
2. Is it FAIR to all concerned?
3. Will it build GOODWILL and BETTER FRIENDSHIPS?
4. Will it be BENEFICIAL to all concerned?

Email id – rotaryclub.kundapurasouth@gmail.com



Rtn. T. Raghavendra Hatwar 2007-08 | Rtn. K. Shankar 2008-09 | Rtn. S. Jayakar Shetty 2009-10 | Rtn. K. K. Kanchan 2010-11 | Rtn. Abhinandan A. Shetty 2011-12 | Rtn. Vivian Crasto 2012-13 | Rtn. G. Shreedhar Shetty 2013-14 | Rtn. K. P. Bhat 2014-15 | Rtn. P. Vasudeva Karanth 2015-16



Rtn. Aouzline F. Rebello 2016-17 | Rtn. J. Srinath Rao 2017-18 | Rtn. Johnson D' Almeida 2018-19 | Rtn.Devaraj 2019-20 | Rtn. Dr. Uttam Kumar Shetty 2020-21 | Rtn.Mahendr Shetty 2021-22 | Rtn.Sathyanarayana Puranik 2022-23 | Rtn.Suresh Mallya 2023-24

*This Bulletin is sponsored by :*

Rtn. Sachin Nackathaya

Mob. : 9343953909

For Private Circulation only